# ಮಳೆಗಾಲಕ್ಕೆ ಮಾಗೋಡು

**ಬೇಡ್ತಿ ನದಿ ಎರಡು ಧಾರೆಗಳಲ್ಲಿ ಧುಮ್ಮಿಕ್ಕುವ ಸೊಬಗನ್ನು ಮಳೆಯ ದಿನಗಳಲ್ಲಿ ನೋಡಲು ನೂರು ಕಣ್ಣು ಸಾಲದು!**

■ ಗ.ಮ. ತುಂಬೇಮನೆ



ಮಳೆಯ ದಿನಗಳು ಜಲಪಾತಗಳಿಗೆ ಶಕ್ತಿಮದ್ದು ನೀಡಿ ಮೈದುಂಬಿಕೊಳ್ಳಲು ಕಾರಣವಾಗುತ್ತವೆ. ಜಲಪಾತದ ಸಂಪೂರ್ಣ ಸೌಂದರ್ಯ ಸವಿಯಲು ಮಳೆಗಾಲವೇ ಪ್ರಶಸ್ತ. ಆದರೆ ದುರ್ಗಮ ಕಾನನದ ನಡುವೆ ಹುದುಗಿಕೊಂಡಿರುವ ಜಲಪಾತಗಳ ಬಳಿಗೆ ಮಳೆಗಾಲದಲ್ಲಿ ಹೋಗಲು ಸಾಧ್ಯವಾಗುವುದಿಲ್ಲ. ಆದರೆ, ಮಾಗೋಡು ಜಲಪಾತಕ್ಕೆ ಮಾತ್ರ ಎಂತಹ ಮಳೆಗಾಲದಲ್ಲೂ ಸುಲಭವಾಗಿ ಹೋಗಬಹುದು.

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದಿಂದ 17 ಕಿ.ಮೀ. ದೂರದಲ್ಲಿ ಮಾಗೋಡು ಜಲಪಾತವಿದೆ. ಮಾಗೋಡಿನಲ್ಲಿ ಬೇಡ್ತಿ ನದಿ ಎರಡು ಹಂತಗಳಲ್ಲಿ, ಸುಮಾರು ನಾಲ್ಕುನೂರು ಮೀಟರ್ ಎತ್ತರದಿಂದ ಧುಮ್ಮಿಕ್ಕುತ್ತದೆ. ಮಳೆಗಾಲದಲ್ಲಿ ಅಗಾಧ ನೀರು ಬೀಳುವ ರಭಸಕ್ಕೆ ಸಿಡಿದು, ತುಂತುರಾಗಿ ನೋಡುಗರ ಮೇಲೂ ನೀರಿನ ಸಿಂಚನವಾಗುತ್ತದೆ.

ನಮಗೆ ಅದೃಷ್ಟವಿದ್ದು, ಬಿಸಿಲು ಮತ್ತು ಮಳೆ ಜೊತೆಯಾಗಿ ಬಂದರೆ ಇಡೀ ಜಲಪಾತಕ್ಕೆ ಕಾಮನಬಿಲ್ಲಿನ ಪ್ರಭಾವಳಿ ರೂಪುಗೊಂಡು, ಕ್ಷಣಾರ್ಧದಲ್ಲೇ ಕಿನ್ನರಲೋಕ ಸೃಷ್ಟಿಯಾಗುವುದು. ದಟ್ಟ ಅಡವಿಯ ಕಣಿವೆಯಿಂದ ಎದ್ದು ಬರುವ ಮೋಡಗಳು ಜಲಪಾತವನ್ನು ಮುಸುಕಿ ಭ್ರಮಾಲೋಕ ಸೃಷ್ಟಿಸಿಬಿಡುತ್ತವೆ.

ಕೆಲವೊಮ್ಮೆ ಮಂಜು ಪೂರ್ತಿ ಆವರಿಸಿ ಜಲಪಾತ ಕಾಣದಂತಾಗುತ್ತದೆ. ದಿಗಿಲು ಹುಟ್ಟಿಸುವ ಜಲಪಾತದ ಭೋರ್ಗರೆತದ ದಿಕ್ಕಿನಲ್ಲಿ ನೋಡುತ್ತಿರುವಂತೆ, ಬೀಸುವ ಗಾಳಿಗೆ ನಿಧಾನವಾಗಿ ಮಂಜಿನ ಪರದೆ ಸರಿಯುತೊಡಗುತ್ತದೆ; ಸಿನಿಮಾದಲ್ಲಿ ಹೀರೋ ತೆರೆಯ ಮೇಲೆ ಕಾಣಿಸಿಕೊಳ್ಳುವಂತೆ ಮಂಜಿನ ಪರದೆಯಿಂದ ಹೊರಬರುವ ಜಲಪಾತದ ದರ್ಶನವನ್ನು ನೋಡಿಯೇ ಅನುಭವಿಸಬೇಕು. ಮೋಡದ ಮರೆಯಿಂದ ತೂರಿ ಬರುವ ಸೂರ್ಯ ಕಿರಣಗಳು ಅಲ್ಲಲ್ಲಿ ಸ್ಪಾಟ್ ಲೈಟ್ ಬಿಟ್ಟು ಜಲಪಾತದ ಕೆಲವು ಭಾಗಗಳನ್ನು ಹೈಲೈಟ್ ಮಾಡುತ್ತಿರುವಂತೆ ಕಾಣಿಸುತ್ತದೆ.

ಗಾಳಿ ಜೋರಾಗಿ ಬೀಸಿದರೆ ಜಲಪಾತಕ್ಕೆ ಕವಿದ ಮಂಜು ನಮನ್ನೂ ಮುತ್ತಿಕೊಂಡು ಹತ್ತಿರವಿರುವವರೇ ಗೋಚರಿಸುವುದಿಲ್ಲ! ಮಧ್ಯಾಹ್ನದ ಸಮಯದಲ್ಲೂ ದಟ್ಟ ಮಂಜಿಗೆ ಸೂರ್ಯನೂ ಮಬ್ಬಾಗಿ, ಬೆಳಗಿನ ಜಾವದ ಅನುಭವ ಉಂಟಾಗುತ್ತದೆ. ಜಲಪಾತ ವೀಕ್ಷಿಸಲು, ಬಾನಿಂದ ಭೂಮಿಗೆ ಮೋಡ ಇಳಿವ ವೈಭವ ನೋಡಲು, ಮಳೆಗಾಲದಲ್ಲಿ ಮರೆಯದೇ ಮಾಗೋಡು ಜಲಪಾತ ನೋಡಲು ಹೋಗಬೇಕು.

ಪ್ರತಿಕ್ರಿಯಿಸಿ: feedback@sudha.co.in

